ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 12.01.2026

ಪಾಟೀ ಸವಾಲು ಃ ಎದುರುದಾರರ ಪರ ಶ್ರೀ. ಬಿ.ಎಂ.ಜೆ ವಕೀಲರಿಂದ

1. ನನಗೆ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ. ನನ್ನ ತಾಯಿಯ ಹೆಸರು ಬೋರಮ್ಮ ಆಗಿರುತ್ತದೆ. ಬೋರಮ್ಮನವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಶಿವಾಯಶೆಟ್ಟಿ, ನಾಗೆಂದ್ರಶೆಟ್ಟಿ ಆಗಿರುತ್ತದೆ. ನನ್ನ ತಾಯಿ ಸುಮಾರು 45 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಶಿವಣ್ಣಶೆಟ್ಟಿ ಯಾವಾಗ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಜೀವಂತ ಇರುವಾಗಲೇ ನನ್ನ ಅಣ್ಣ ಮತ್ತು ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಿಭಾಗ ಆದ ನಂತರ ಹಿಸ್ಸಾದಾರರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ನನ್ನ ಅಣ್ಣ ಕಾರಣಾಂತರಗಳಿಂದ ತನ್ನ ಹಿಸ್ಸೆಯನ್ನು ಎದುದಾರರ ತಾಯಿ ಮಹದೇವಮ್ಮರವರಿಗೆ ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಮಾರಾಟ ಮಾಡಿರುವುದು ಸತ್ಯ ಎಂದು ನುಡಿಯುತ್ತಾರೆ. ಹಾಲಿ ಎದುರುದಾರರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ನಾನು ಸಹ ಸಾಕ್ಷಿದಾರ ಎಂದರೆ ಸರಿಯಲ್ಲ. ನಾನು ಎದುರುದಾರರ ಸ್ವಾಧೀನಾನುಭವಕ್ಕೆ ತಕರಾರು ಮಾಡಿದ ಕಾರಣ ಅವರು ಗೌರವಾನ್ವಿತ 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂಧಕಾಜ್ಞೆ ದಾವಾ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಿಸ್ಸಾ ಆಸ್ತಿಯನ್ನು ಸಹ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಎದುರುದಾರರ ವಿರುದ್ಧ ಇನ್ನು ಎರಡು ದಾವಾಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಎದುರದಾರರು ಸಹ ನನ್ನ ವಿರುದ್ಧ ದಾವಾ ದಾಖಲಿಸಿರುತ್ತಾರೆ ಎಂದರೆ ಸರಿ.

3. ನಾನು ಕಳೆದ ಎರಡು ವರ್ಷಗಳಿಂದ ನಮ್ಮ ಊರಿನಲ್ಲಿಯೆ ಇದ್ದೇನೆ ಎಂದರೆ ಸರಿ. ನಾನು ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದೆ ಎಂದರೆ ಸರಿ. ನನಗೆ ಇಬ್ಬರೂ ಹೆಣ್ಣು ಮಕ್ಕಳು ಮೂವರು ಗಂಡು ಮಕ್ಕಳು ಇದ್ದಾರೆ ಎಂದರೆ ಸರಿ. ಅವರು ನನ್ನ ಜೊತೆ ವಾಸ ಇದ್ದಾರೆ ಎಂದರೆ ಸರಿ. ನನಗೆ ಆರೋಗ್ಯ ಚೆನ್ನಾಗಿದ್ದರೂ ಸಹ ಒಂದೂವರೆ ವರ್ಷಗಳ ಕಾಲ ತಡವಾಗಿ ಪ್ರಸ್ತುತ ಮೇಲ್ಮನವಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದರುದಾರರಿಗೆ ತೊಂದರೆ ಕೊಡಲು ಪ್ರಸ್ತುತ ಮೇಲ್ಮನವಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.